॥ ಭಗವಾನ್ ಶ್ರೀ ನೇಮಿನಾಥಾಯ ನಮಃ ॥ ಓಂ ॥ ಭಗವಾನ್ ಶ್ರೀ ಗೋಮಟೇಶಾಯ ನಮಃ ॥

ಶ್ರೀಮನ್ನಾಭೇಯಜಾತಃ ಪ್ರಥಮ ಮನಸಿಜೋ ನಾಭಿರಾಜಸ್ಯ ನಪ್ತಾ । ಸಂಸಾರಂ ದೇಹಭೋಗಂ ತೃಣಮಿವ ವಿಮುಚೇ ಭಾರತೇ ಸಂಗರೇ ಯಃ ॥
ಕಾಯೋತ್ಸರ್ಗಂ ವಿತನ್ವನ್ನಹದುರಗಲಸದ್ಗರ್ಭವಲ್ಮೀಕಜುಷ್ಟಂ । ಸೋಽಯಂ ವಿಂಧ್ಯಾಚಲೇಶೋ ವಿಜಯತು ಸುಚಿರಂ ಗೋಮಟೇಶೋ ಜಿನೇಶಃ ॥

# ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಮಹೋತ್ಸವ 2015

## ಶ್ರೀಮುಖ ಪತ್ರಿಕೆ



ಪಾವನ ಕ್ಷೇತ್ರ ಕಾರ್ಕಳದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಪೂಜಾ ಮಹೋತ್ಸವವನ್ನು
ಭಗವಾನ್ ಶ್ರೀ ನೇಮಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ ಪೂರ್ವಕ
ಪರಮ ಪೂಜ್ಯ ಮುನಿ ಮಹಾರಾಜರ ಪಾವನ ಸಾನ್ನಿಧ್ಯ ಹಾಗೂ ಪರಮ ಪೂಜ್ಯ ಎಲ್ಲಾ ಭಟ್ಟಾರಕ ಸ್ವಾಮೀಜಿಗಳವರ
ಉಪಸ್ಥಿತಿಯಲ್ಲಿ ನೆರವೇರಿಸಲು ನಿಶ್ಚಯಿಸಲಾಗಿದೆ.
ಆ ಪ್ರಯುಕ್ತ ಸ್ವಸ್ತಿಶ್ರೀಮದ್ರಾಯ ರಾಜಗುರು ಭೂಮಂಡಲಾಚಾರ್ಯವರ್ಯ ಮಹಾವಾದ-ವಾದೀಶ್ವರರಾಯ, ವಾದಿಪಿತಾಮಹ, ಸಕಲ ವಿದ್ವಜ್ಜನ ಸಾರ್ವಭೌಮಾದ್ಯನೇಕ ಬಿರುದಾವಳಿ
ವಿರಾಜಮಾನರುಂ ಶ್ರೀಮನ್ನಿಜಘಟಿಕಸ್ಥಾನ ಪನಸೋಗೆ ವಂಗನಗರ ಕಳಸ ಕಾರ್ಕಳ ಚತುಃಸಿದ್ಧ ಸಿಂಹಾಸನಾಧೀಶ್ವರರಾದ
**ರಾಜಗುರು ಧ್ಯಾನಯೋಗಿ ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ**
ಪಾವನ ಸಾನ್ನಿಧ್ಯ ಹಾಗೂ
**ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪದ್ಮಭೂಷಣ ರಾಜರ್ಷಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರ**
ಅಧ್ಯಕ್ಷತೆಯಲ್ಲಿ
ಸ್ವಸ್ತಿಶ್ರೀ ಮಹಾವೀರ ಶಕ ವರ್ಷ೨೫೪೧ ಶಾಲಿವಾಹನ ಶಕ ೧೯೩೬ ಜಯ ನಾಮ ಸಂವತ್ಸರದ ಮಾಘ ಶುದ್ಧ ೧ಯು ದಿನಾಂಕ 21-1-2015ನೇ ಬುಧವಾರ ಮೊದಲ್ಗೊಂಡು
ಮಾಘ ಶುದ್ಧ ೧೨ ಯು ದಿನಾಂಕ 31-1-2015ನೇ ಶನಿವಾರದ ಪರ್ಯಂತ ಕಾರ್ಕಳದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕ ಮಹೋತ್ಸವವು
ಭಗವಾನ್ ಶ್ರೀ ನೇಮಿನಾಥ ತೀರ್ಥಂಕರರ ಪಂಚಕಲ್ಯಾಣಪೂರ್ವಕ
ಈ ಕೆಳಗೆ ಕಾಣಿಸಿದ ಆಗಮೋಕ್ತ ವಿಧಿ-ವಿಧಾನಗಳೊಂದಿಗೆ ವೈಭವಯುತವಾಗಿ ಜರಗಲಿರುವುದು.

## ಧಾರ್ಮಿಕ ಪೂಜಾ ಕಾರ್ಯಕ್ರಮಗಳು

### ದಿನಾಂಕ 21-1-2015ನೇ ಬುಧವಾರ ಮಾಘ ಶುದ್ಧ ಪಾಡ್ಯ

ಪೂರ್ವಾಹ್ನ ಗಂಟೆ 8-15ಕ್ಕೆ ಹಿರಿಯಂಗಡಿ ಭಗವಾನ್ ಶ್ರೀ ನೇಮಿನಾಥ ಸ್ವಾಮಿ ಬಸದಿಯಿಂದ ಭಗವಂತನ ಶ್ರೀ ವಿಹಾರ ಹೊರಡುವುದು. ದಿವಾ ಗಂಟೆ 10-45ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಸನ್ನಿಧಿಯಲ್ಲಿ ಇಂದ್ರ ಪ್ರತಿಷ್ಠೆ. ಗಂಟೆ 11-52ರ ಮೇಷ ಲಗ್ನದಲ್ಲಿ ತೋರಣ ಮುಹೂರ್ತ, ಯಜ್ಞಶಾಲಾ ಪ್ರವೇಶ, ವಿಮಾನಶುದ್ಧಿ, ನಾಂದಿಮಂಗಲ, ವಾಸ್ತುಪೂಜಾ ವಿಧಾನ, ನವಗ್ರಹ ಮಹಾಶಾಂತಿ, ಗ್ರಾಮ ಬಲಿ ವಿಧಾನ, ಮೃತ್ತಿಕಾ ಸಂಗ್ರಹಣ, ಅಂಕುರಾರ್ಪಣ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 7-40ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:** ಕೆರ್ವಾಶೆ ಹೋಬಳಿ ಪಡಂಗಡಿಗುತ್ತು ಶ್ರೀ ನೇಮಿರಾಜ ಪಡಿವಾಳ, ಹೋಬಳಿ ಗುರಿಕಾರ ದಿ। ಶಿರ್ತಾಡಿ ಧರ್ಮಸಾಮ್ರಾಜ್ಯರ ನೆನಪಿಗಾಗಿ ಅಳಿಯ ಡಾ। ಎಸ್. ಪ್ರಭಾಚಂದ್ರ ಮತ್ತು ಮಕ್ಕಳು ಶಿಮುಂಜೆಗುತ್ತು ಶಿರ್ತಾಡಿ ಮತ್ತು ದಿ। ಶ್ರೀದೇವಿಯಮ್ಮ, ದಿ। ಇಂದಿರಾವತಿ ಅಮ್ಮ ಇವರ ನೆನಪಿಗಾಗಿ ಸಚಿದೇವಿ ನಾಗರಾಜಯ್ಯ, ಮಕ್ಕಳು ಹಾಗೂ ಅಳಿಯ ಡಿ. ಸುಧಾಕರ ಮತ್ತು ಕೆರ್ವಾಶೆ ಹೋಬಳಿ ಪಡಂಗಡಿಗುತ್ತು ಕುಟುಂಬಸ್ಥರು.

### ದಿನಾಂಕ 22-1-2015ನೇ ಗುರುವಾರ ಮಾಘ ಶುದ್ಧ ಬಿದಿಗೆ

ಪೂರ್ವಾಹ್ನ ಗಂಟೆ 8-10ರಿಂದ ಶ್ರೀಪೀಠ-ಯಂತ್ರಾರಾಧನೆ, ಯಕ್ಷಾರಾಧನಾಪೂರ್ವಕ ಸರ್ವಾಹ್ಣ ಯಕ್ಷ ದೇವರಿಗೆ ಕಲಾರೋಪಣೆ. ಮಧ್ಯಾಹ್ನ ಗಂಟೆ 12-35ರ ಅಭಿಜಿನ್ ಲಗ್ನದಲ್ಲಿ ಧ್ವಜಾರೋಹಣ. ಅಪರಾಹ್ನ ಗಂಟೆ 2-30ರಿಂದ ಪ್ರಾರಂಭಗೊಂಡು ಸಾಯಂಕಾಲ ಗಂಟೆ 4-15ರ ಮಿಥುನ ಲಗ್ನದಲ್ಲಿ ಶ್ರೀ ಬ್ರಹ್ಮಯಕ್ಷದೇವರಿಗೆ ಆರಾಧನಾ - ಪೂರ್ವಕ ಕಲಾರೋಪಣೆ, ಭೇರೀತಾಡನ, ಮಂಗಲಸೂತ್ರ ಬಂಧನ, ಶ್ರೀಬಲಿ ವಿಧಾನ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:**
ದಿ। ಶ್ಯಾಮಲಾದೇವಿ, ತೋಡಾರು ಇವರ ನೆನಪಿಗಾಗಿ ಶ್ರೀಮತಿ ಅನ್ವೇಷ ಮತ್ತು ಶ್ರೀ ಪಿ.ಪಿ. ಹೆಗ್ಡೆ, ನ್ಯಾಯವಾದಿಗಳು, ಮಂಗಳೂರು ಮತ್ತು ಕುಟುಂಬಸ್ಥರು.

### ದಿನಾಂಕ 23-1-2015ನೇ ಶುಕ್ರವಾರ ಮಾಘ ಶುದ್ಧ ತದಿಗೆ

ಪೂರ್ವಾಹ್ನ ಗಂಟೆ 8-00ರಿಂದ ನಿತ್ಯವಿಧಿ ಸಹಿತ ಶ್ರೀಬಲಿ ವಿಧಾನ, ಲೋಕಕಲ್ಯಾಣಾರ್ಥವಾಗಿ ಬೃಹಚ್ಛಾಂತಿ ಯಂತ್ರಾರಾಧನೆ. ಬಲ ಬಸದಿಯಲ್ಲಿ ಭಗವಾನ್ ಶ್ರೀ ಶೀತಲನಾಥ ತೀರ್ಥಂಕರರಿಗೆ ಶ್ರೀ ಶೀತಲನಾಥ ವಿಧಾನ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:** ಪಡುಬಿದ್ರಿ ಬೀಡು ಶ್ರೀ ಚಂದಯ್ಯ ಅರಸರಾದ ಕಿನ್ಯಕ್ಕ ಬಲ್ಲಾಳರು, ಶ್ರೀ ರತ್ನಾಕರ್‌ರಾಜರು ಮತ್ತು ಮಕ್ಕಳು ಹಾಗೂ ಪಡುಬಿದ್ರಿ ಬೀಡು ಕಿನ್ಯಕ್ಕ ಬಲ್ಲಾಳರ ವಂಶಸ್ಥರು, ಎರ್ಮಾಳುಬೀಡು ಶ್ರೀಮತಿ ನಾಗವೇಣಿ ಅಮ್ಮ ಶಾಂತಿರಾಜ ಅರಸು ಮಾರಮ್ಮ ಹೆಗ್ಡೆಯವರ ಮಕ್ಕಳು ಮತ್ತು ಇವರ ಸಹೋದರ ಶ್ರೀ ಎನ್. ವಜ್ರಕುಮಾರ್ ಧಾರವಾಡ.

### ದಿನಾಂಕ 24-1-2015ನೇ ಶನಿವಾರ ಮಾಘ ಶುದ್ಧ ಪಂಚಮಿ

ಪೂರ್ವಾಹ್ನ ಗಂಟೆ 8-15ರಿಂದ ನಿತ್ಯವಿಧಿ ಸಹಿತ ಗ್ರಹಯಜ್ಞ ವಿಧಾನ, ಜಲಾಗ್ನಿ ಹೋಮ, ಶ್ರೀಬಲಿ ವಿಧಾನ, ಶ್ರೀ ಭಕ್ತಾಮರ ಯಂತ್ರಾರಾಧನೆ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:** ನಲ್ಲೂರು ಮೂಡುಕೋಡಿ ದಿ। ಧರ್ಮರಾಜ ಪೂವಣಿ ಮತ್ತು ಅವರ ಪತ್ನಿ ದಿ। ಕಮಲಾವತಿ ಅಮ್ಮ ಹಾಗೂ ಮೂಡಾಯೂರುಗುತ್ತು ದಿ। ಭೋಜರಾಜ ಪಡಿವಾಳ್ ಮತ್ತು ಅವರ ಪತ್ನಿ ದಿ। ಪ್ರಭಾವತಿ ಅಮ್ಮನವರ ನೆನಪಿಗಾಗಿ ಶ್ರೀ ಪ್ರಸನ್ನ ಕುಮಾರ್ ಮತ್ತು ಇವರ ಧರ್ಮಪತ್ನಿ ಶ್ರೀಮತಿ ಸುವರ್ಣಲತಾ 'ಪ್ರಸನ್ನಲತಾ' ಹಳೆಕೋಟೆ, ಬೆಳ್ತಂಗಡಿ.

### ದಿನಾಂಕ 25-1-2015ನೇ ಭಾನುವಾರ ಮಾಘ ಶುದ್ಧ ಷಷ್ಠಿ

ಪೂರ್ವಾಹ್ನ ಗಂಟೆ 8-00ರಿಂದ ನಿತ್ಯವಿಧಿ ಸಹಿತ ಶ್ರೀಬಲಿ ವಿಧಾನ, ಶ್ರೀ ಬೃಹತ್ ಯಾಗಮಂಡಲ ಯಂತ್ರಾರಾಧನೆ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:**
ಶ್ರೀಮತಿ ರತ್ನಾವತಿ ಅಮ್ಮ ಹಾಗು ಶ್ರೀಮತಿ ಕವಿತಾ ಜೈನ್ ಮತ್ತು ಶ್ರೀ ಪುಷ್ಪರಾಜ್ ಜೈನ್ ಹಾಗು ಕುಟುಂಬಸ್ಥರು
'ಅಭಿಷ್' ನಂತೂರು, ಮಂಗಳೂರು.

### ದಿನಾಂಕ 26-1-2015ನೇ ಸೋಮವಾರ ಮಾಘ ಶುದ್ಧ ಸಪ್ತಮಿ

ಪೂರ್ವಾಹ್ನ ಗಂಟೆ 8-00ರಿಂದ ನಿತ್ಯವಿಧಿ ಸಹಿತ ಶ್ರೀಬಲಿ ವಿಧಾನ, ಸಾಯಂಕಾಲ ಗಂಟೆ 6-00ರಿಂದ ಜಲಯಾತ್ರಾ ಮಹೋತ್ಸವ ಮತ್ತು ಸಭಾಮಂಟಪದಲ್ಲಿ ಮಾತುರಾಹ್ವಾನಾದಿ ಕ್ರಿಯಾಯುಕ್ತ ಗರ್ಭಾವತರಣ ಕಲ್ಯಾಣ, ಸೀಮಂತ ಪ್ರಸ್ತ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:** ಮರ್ರೋಡಿ ಅಂಗಡಿಬೆಟ್ಟು ಗುತ್ತು ದಿ। ಬ್ರಹ್ಮಯ್ಯ ಕಾಬಯರು ಹಾಗೂ ಅವರ ಧರ್ಮಪತ್ನಿ ಮಿಜಾರು ಕನಕಬೆಟ್ಟು ದಿ। ಕಮಲಮ್ಮನವರು ಮತ್ತು ದಿ। ಕೆ. ಶಾಂತಾ ಇವರ ನೆನಪಿಗಾಗಿ ಶ್ರೀ ಎಂ. ಕೆ. ರತ್ನಾಕರ, ಕಾರ್ಕಳ ಹಾಗೂ ಪುತ್ರಿ ಶ್ರೀಮತಿ ಸರಳಾ ಮತ್ತು ಅಳಿಯ ಶ್ರೀ ಉದಯ ಬಲ್ಲಾಳ್ ಮತ್ತು ಮಕ್ಕಳು.

### ದಿನಾಂಕ 27-1-2015ನೇ ಮಂಗಳವಾರ ಮಾಘ ಶುದ್ಧ ಅಷ್ಟಮಿ

ಪ್ರಾತಃ ಗಂಟೆ 6-55ರಿಂದ ಶ್ರೀ ಭಗವಂತನ ಜನನೋತ್ಸವ. ನಿತ್ಯವಿಧಿ ಸಹಿತ ಅಷ್ಟದಿಕ್ಷು ಧಾಮಸಂಪ್ರೋಕ್ಷಣೆ, ಶ್ರೀಬಲಿ ವಿಧಾನ. ಪ್ರಾತಃ ಗಂಟೆ 8-30ರಿಂದ ಜಿನಬಾಲಕನ ಶ್ರೀವಿಹಾರ, ಪೂರ್ವಾಹ್ನ ಗಂಟೆ 9-30ರಿಂದ ಹಿರಿಯಂಗಡಿ ಭಗವಾನ್ ಶ್ರೀ ನೇಮಿನಾಥ ಸ್ವಾಮಿ ಬಸದಿಯ ಸನ್ನಿಧಿಯಲ್ಲಿರುವ - ಪಾಂಡುಕಾ-ಶಿಲೆಯಲ್ಲಿ ಜನ್ಮಾಭಿಷೇಕ ಕಲ್ಯಾಣ. ಸಾಯಂಕಾಲ ಗಂಟೆ 6-30ರಿಂದ ಸಭಾ ಮಂಟಪದಲ್ಲಿ ನಾಮಕರಣೋತ್ಸವ, ಬಾಲಲೀಲೋತ್ಸವ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:**
ನಾವುರಗುತ್ತು ಕುಡಾಲ್ ಮೇರ್ಕಳ ದಿ। ಗುಮ್ಮಣ್ಣ ಶೆಟ್ರು ಮತ್ತು ಅವರ ಧರ್ಮಪತ್ನಿ ಮಿಜಾರು ಕನಕಬೆಟ್ಟು ದಿ। ದೇಜಮ್ಮನವರ ನೆನಪಿಗಾಗಿ
ಶ್ರೀ ಎಂ. ಕೆ. ಶ್ರೀಧರ ಮತ್ತು ಮೃತರ ಮೊಮ್ಮಕ್ಕಳು.

### ದಿನಾಂಕ 28-1-2015ನೇ ಬುಧವಾರ ಮಾಘ ಶುದ್ಧ ನವಮಿ

ಪೂರ್ವಾಹ್ನ ಗಂಟೆ 8-00ರಿಂದ ನಿತ್ಯವಿಧಿ ಸಹಿತ ಶ್ರೀಬಲಿ ವಿಧಾನ, ಗಣಧರ ವಲಯ ಯಂತ್ರಾರಾಧನಾ ವಿಧಾನ. ಸಾಮ್ರಾಜ್ಯ-ವೈಭವ, ವೈರಾಗ್ಯಪೂರ್ವಕ ದೀಕ್ಷಾವಿಧಿ, ಪರಿನಿಷ್ಕ್ರಮಣ ಕಲ್ಯಾಣ. ಸಂಜೆ ವೈಭವದ ಪುರಮೆರವಣಿಗೆಯೊಂದಿಗೆ ಅಗ್ರೋದಕ ಜಲಾನಯನ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೫೦೪ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:**
ದಿ। ಎಂ. ಎನ್. ನೇಮಿರಾಜ ಹೆಗ್ಡೆ ಮತ್ತು ಅವರ ಧರ್ಮಪತ್ನಿ ದಿ। ಎಂ. ಕುಸುಮಾಜಿ ಅಮ್ಮನವರ ನೆನಪಿಗಾಗಿ
ಶ್ರೀಮತಿ ಅರುಣಾ ಮತ್ತು ಶ್ರೀ ಎಂ. ಎನ್. ರಾಜೇಂದ್ರ ಕುಮಾರ್ ಮತ್ತು ಮಕ್ಕಳು ಹಾಗೂ ಕುಟುಂಬಸ್ಥರು, 'ಕುಸುಮ' ಪುಲ್ಕೇರಿ, ಕಾರ್ಕಳ.

### ದಿನಾಂಕ 29-1-2015ನೇ ಗುರುವಾರ ಮಾಘ ಶುದ್ಧ ದಶಮಿ

ಪೂರ್ವಾಹ್ನ ಗಂಟೆ 8-00ರಿಂದ ನಿತ್ಯವಿಧಿ ಸಹಿತ ಗಂಧ ಯಂತ್ರಾರಾಧನೆ. ಮಂತ್ರನ್ಯಾಸ ಕಲಾರೋಪಣಪೂರ್ವಕ ಕೇವಲಜ್ಞಾನ ಕಲ್ಯಾಣ. ಮಧ್ಯಾಹ್ನ ಗಂಟೆ 12-06ರ ಮೇಷ ಲಗ್ನದಲ್ಲಿ ನಯನೋನ್ಮೀಲನ. ಅಪರಾಹ್ಣ ಗಂಟೆ 3-00ರಿಂದ ಸಮವಸರಣ ಪೂಜೆ, ಶ್ರೀವಿಹಾರ. ಸಾಯಂಕಾಲ ಗಂಟೆ 6-30ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ರಾತ್ರಿ ಗಂಟೆ 8-00ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೫೦೪ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:**
ಶ್ರೀಕ್ಷೇತ್ರ ಧರ್ಮಸ್ಥಳದ ರಾಜರ್ಷಿ ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಶ್ರೀಮತಿ ಹೇಮಾವತಿಯವರು
ಹಾಗೂ ಕುಟುಂಬಸ್ಥರು.

### ದಿನಾಂಕ 30-1-2015ನೇ ಶುಕ್ರವಾರ ಮಾಘ ಶುದ್ಧ ಏಕಾದಶಿ

ಪೂರ್ವಾಹ್ನ ಗಂಟೆ 9-00ರಿಂದ ನಿತ್ಯವಿಧಿ ಸಹಿತ ಅಗ್ನಿತ್ರಯಾರ್ಚನಾ-ಪೂರ್ವಕ ನಿರ್ವಾಣ ಕಲ್ಯಾಣ ಮಹೋತ್ಸವ. ಲಘು ಸಿದ್ಧಚಕ್ರ ಯಂತ್ರಾರಾಧನೆ. ಸಾಯಂಕಾಲ ಗಂಟೆ 4-00ರಿಂದ ಶ್ರೀ ಜೈನ ಮಠದಿಂದ ಅಗ್ರೋದಕ ಮೆರವಣಿಗೆ. ಸಂಜೆ ಗಂಟೆ 4-30ರಿಂದ ಭಗವಾನ್ ಶ್ರೀ ಬಾಹುಬಲಿ ಸ್ವಾಮಿಗೆ ಅಗ್ರೋದಕ-ಪೂರ್ವಕ ೧೦೦೮ ಕಲಶ ಮಹಾಭಿಷೇಕ ಮಹೋತ್ಸವ.

**ಸೇವಾ ಕರ್ತೃಗಳು:**
ಸಮಸ್ತ ಜೈನ ಸಮಾಜದ ಪರವಾಗಿ
ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಸಮಿತಿ.

### ದಿನಾಂಕ 31-1-2015ನೇ ಶನಿವಾರ ಮಾಘ ಶುದ್ಧ ದ್ವಾದಶಿ

ಪೂರ್ವಾಹ್ನ ಗಂಟೆ 9-00ರಿಂದ ನಿತ್ಯವಿಧಿ ಸಹಿತ ಅವಭೃತಸ್ನಾನ, ಧ್ವಜಾವರೋಹಣ, ತೋರಣ-ವಿಸರ್ಜನೆ, ಹಿರಿಯಂಗಡಿಗೆ ಭಗವಾನ್ ಶ್ರೀ ನೇಮಿನಾಥ ತೀರ್ಥಂಕರರ ಮತ್ತು ಸರ್ವಾಹ್ಣಯಕ್ಷ ದೇವರ ಶ್ರೀವಿಹಾರ. ಮಹಾಮಂಗಳಾರತಿ, ಪೂಜಾ ವಿಸರ್ಜನೆ ಮತ್ತು ಮಹಾಪ್ರಸಾದ ವಿತರಣೆ.

**ಸೇವಾ ಕರ್ತೃಗಳು:** ಪರಮಪೂಜ್ಯ ರಾಜಗುರು ಧ್ಯಾನಯೋಗಿ ಸ್ವಸ್ತಿ ಶ್ರೀ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ, ಶ್ರೀ ಜೈನಮಠ, ಕಾರ್ಕಳ

ಭಗವಾನ್ ಶ್ರೀ ಬಾಹುಬಲಿ ಸ್ವಾಮಿಯ ಮಹಾಮಸ್ತಕಾಭಿಷೇಕದ ಪೂರ್ವಭಾವಿಯಾಗಿ ದಿನಾಂಕ 24-12-2014ರಿಂದ ಮೊದಲ್ಗೊಂಡು ದಿನಾಂಕ 19-1-2015ರ ತನಕ ಕಾರ್ಕಳದ 18 ಬಸದಿಗಳಲ್ಲಿ ವಿವಿಧ ಆರಾಧನೆಗಳನ್ನು ಹಮ್ಮಿಕೊಳ್ಳಲಾಗಿದೆ.

ಈ ಮೇಲಿನಂತೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಮಹಾಮಸ್ತಕಾಭಿಷೇಕ ಮಹೋತ್ಸವವು ಸಂಪನ್ನಗೊಳ್ಳಲಿರುವುದರಿಂದ ಧರ್ಮಬಂಧುಗಳಾದ ತಾವೆಲ್ಲರೂ ಭಾಗವಹಿಸಿ, ಪುಣ್ಯಭಾಗಿಗಳಾಗಬೇಕಾಗಿ ಅಪೇಕ್ಷಿಸುತ್ತೇವೆ.

ಇತಿ ಭದ್ರಂ ಭೂಯಾತ್, ಇತ್ಯಾಶೀರ್ವಾದ - ಸ್ವಸ್ತಿಶ್ರೀ ಲಲಿತಕೀರ್ತಿ ಸ್ವಾಮಿಗಳವರು, ಶ್ರೀ ಜೈನಮಠ, ಕಾರ್ಕಳ

| | | | |
|---|---|---|---|
| ಎಂ. ಕೆ. ವಿಜಯ ಕುಮಾರ್<br>ಪ್ರಧಾನ ಕಾರ್ಯದರ್ಶಿ | ಡಾ। ಕೆ. ಜೀವಂಧರ ಬಲ್ಲಾಳ್<br>ಕೋಶಾಧಿಕಾರಿ | ಡಾ। ಎಂ. ಎನ್. ರಾಜೇಂದ್ರ ಕುಮಾರ್<br>ಕಾರ್ಯಾಧ್ಯಕ್ಷರು | ಡಾ। ಡಿ. ವೀರೇಂದ್ರ ಹೆಗ್ಗಡೆಯವರು<br>ಅಧ್ಯಕ್ಷರು |

ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು, ಕಾರ್ಕಳ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾಮಸ್ತಕಾಭಿಷೇಕ ಸಮಿತಿ - 2015

ಪ್ರತಿದಿನ ಪರಮ ಪೂಜ್ಯ ಮುನಿ ಮಹಾರಾಜರುಗಳಿಂದ, ಪೂಜ್ಯ ಭಟ್ಟಾರಕರುಗಳಿಂದ ಮಂಗಲ ಪ್ರವಚನ, ಪಂಚಕಲ್ಯಾಣ ದೃಶ್ಯಾವಳಿಗಳು, ಧಾರ್ಮಿಕ ಸಭೆ, ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಬೆಳಿಗ್ಗೆ ಉಪಾಹಾರ, ಮಧ್ಯಾಹ್ನ ಸಂಘಸಂತರ್ಪಣೆ, ಸಂಜೆ ಉಪಾಹಾರ ಆತಿಥ್ಯಗಳು ನೆರವೇರಲಿದೆ.